

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

## ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ

ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಶತಮಾನೋತ್ಸವದ ಅಂಗವಾಗಿ
ಸ್ಥಾನಿಕ ಸಮಾಜ ಬಾಂಧವರಿಗಾಗಿ

**“ಕ್ರೀಡಾಕೂಟ”** ಹಾಗೂ
**“ಸಾಮೂಹಿಕ ಸತ್ಯನಾರಾಯಣ ಪೂಜೆ”** ನಡೆಯಲಿದೆ.

ದಿನಾಂಕ : **20-01-2008 ಆದಿತ್ಯವಾರ ಬೆಳಿಗ್ಗೆ 9-30 ರಿಂದ**
ಸ್ಥಳ : **ಕೆನರಾ ಹಿರಿಯ ಪ್ರಾಥಮಿಕ ಶಾಲೆ, ಉರ್ವಾ, ಮಂಗಳೂರು**
ಬೆಳಿಗ್ಗೆ 9-30ಕ್ಕೆ ಉದ್ಘಾಟನೆ : **Ln P.S. ಪ್ರಭಾಕರ ರಾವ್,**
ಅಧ್ಯಕ್ಷರು, ಲಯನ್ಸ್ ಕ್ಲಬ್, ಮಂಗಳೂರು
ಬೆಳಿಗ್ಗೆ 10-00ರಿಂದ : **ವಿವಿಧ ವಯೋಮಾನದ ವಿಭಾಗಗಳಿಗೆ ವಿವಿಧ ಸ್ಪರ್ಧೆಗಳು**
ಮಧ್ಯಾಹ್ನ 12-30ರಿಂದ : **ಸತ್ಯನಾರಾಯಣ ಪೂಜೆಯ ಮಹಾಮಂಗಳಾರತಿ, ಪ್ರಸಾದ ವಿತರಣೆ**
ಸಂಜೆ 4-30 ರಿಂದ : **ಸಮಾರೋಪ ಸಮಾರಂಭ, ಬಹುಮಾನ ವಿತರಣೆ**
ಅಧ್ಯಕ್ಷತೆ : **ಶ್ರೀ ಎಂ.ಆರ್. ವಾಸುದೇವ**
ಅಧ್ಯಕ್ಷರು, ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ
ಮುಖ್ಯ ಅತಿಥಿ : **ಡಾ। ಬಿ. ಹೆಚ್. ಶ್ರೀಪತಿ ರಾವ್**
ಪ್ರಾಂಶುಪಾಲರು, ಯೇನಪೋಯ ಡೆಂಟಲ್ ಕಾಲೇಜು

### ಸ್ಪರ್ಧೆಗಳ ವಿವರ

**ಮಕ್ಕಳಿಗೆ** : ಚಮಚದಲ್ಲಿ ಲಿಂಬೆ, ಒಂಟಿಕಾಲಿನ ಓಟ, ಬಟಾಟೆ ರೇಸ್, ಸೂಜಿಗೆ ನೂಲು, 50 ಮೀಟರ್ ಓಟ

**ಪುರುಷರಿಗೆ** : ಶೂಟಿಂಗ್‌ದ ವಿಕೆಟ್, ಶಟಲ್ ಬ್ಯಾಡ್ಮಿಂಟನ್ (Single 2 Doubles), ನಡಿಗೆ ಸ್ಪರ್ಧೆ, ಓಟದ ಸ್ಪರ್ಧೆ, ರಿಲೇ ಸ್ಪರ್ಧೆ, ಎತ್ತರ ಜಿಗಿತ, ಉದ್ದ ಜಿಗಿತ, ಮಡಕೆ ಒಡೆಯುವುದು, ವಾಲಿಬಾಲ್

**ಮಹಿಳೆಯರಿಗೆ**: ತ್ರೋಬಾಲ್, ಶಟಲ್ ಬ್ಯಾಡ್ಮಿಂಟನ್, ಓಟದ ಸ್ಪರ್ಧೆ, ಸೂಜಿ ನೂಲು ಓಟ, ಲಿಂಬೆ ಚಮಚದ ಓಟ, ಬುಕ್ ಬ್ಯಾಲೆನ್ಸ್, ಬನ್ ಆ್ಯಂಡ್ ವಾಟರ್ ಓಟ

**ಸೂಚನೆಗಳು :**

1. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಅದೇ ದಿನ ಬೆಳಿಗ್ಗೆ 9-00 ಗಂಟೆಗೆ ಸರಿಯಾಗಿ ಹೆಸರು ನೊಂದಾಯಿಸಬೇಕು.
2. ಆಗಮಿಸುವವರಿಗೆ ಸತ್ಯನಾರಾಯಣ ಪೂಜೆ ಬಳಿಕ ಪ್ರಸಾದ ಭೋಜನವಿದೆ.
3. ಮೇಲಿನ ಸ್ಪರ್ಧೆಗಳನ್ನು ವಯೋಮಾನಕ್ಕನುಗುಣವಾಗಿ ವಿಂಗಡಿಸಲಾಗುವುದು.
4. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಚೇತನ್ ಶರ್ಮಾ : 9844187083, ನಾಗೇಶ್ ರಾವ್ : 9845081685
ಮಣೀಶ್ ರಾವ್ : 9448726499, ಅರುಣಾ ಸೋಮಶೇಖರ್ 0824-2452860

***ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಳ್ಳಬೇಕಾಗಿ ವಿನಂತಿ***

ಸರ್ವರಿಗೂ ಆದರದ ಸ್ವಾಗತ

## ಶ್ರೀ ಸುಬ್ರಹ್ಮಣ್ಯ ಸಭಾ - ವೆಬ್‌ಸೈಟ್ ಪ್ರಾರಂಭ

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ತನ್ನ ವೆಬ್‌ಸೈಟನ್ನು ಪ್ರಾರಂಭಿಸಿರುವ ವಿಚಾರವನ್ನು ತಿಳಿಸಲು ಸಂತೋಷಪಡುತ್ತೇವೆ.

**Website : www.subramanyasabha.com**

ನಮ್ಮ ಸಮಾಜ ಬಾಂಧವರೆಲ್ಲರೂ ಈ ಸೈಟಿಗೆ ಆಗಾಗ ಭೇಟಿ ಕೊಡುತ್ತಿರಬೇಕೆಂದು ಕಳಕಳಿಯ ವಿನಂತಿ. ಈ ವೆಬ್‌ಸೈಟನ್ನು ನಿರಂತರವಾಗಿ ಊರ್ಜಿತಗೊಳಿಸುವ (update), ನಮ್ಮ ಸಭಾದ ವಿವಿಧ ಕಾರ್ಯಕ್ರಮಗಳನ್ನು ನಿತ್ಯ ಪರಿಚಯಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಈ ಬಗ್ಗೆ ತಮ್ಮ ಸಲಹೆ ಸೂಚನೆಗಳಿಗೆ ಮುಕ್ತ ಅವಕಾಶಗಳಿರುತ್ತವೆ.

ಈ ವೆಬ್‌ಸೈಟಿನಲ್ಲಿ ತಮ್ಮ ಸಂಸ್ಥೆ, ವ್ಯವಹಾರ, ವ್ಯಾಪಾರ, ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ಕೊಟ್ಟು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಜಾಹೀರಾತು ಅಲ್ಲದೆ ಶುಭಾಶಂಸನೆ ಯಾ ಇತರ ಸಂದೇಶಗಳನ್ನು ಕೂಡಾ ಕೊಡಬಹುದು. ಇದಕ್ಕೆ ತಗಲುವ ವಾರ್ಷಿಕ ಚಂದಾ ರೂ.2,000/-. ಈ ನಿಟ್ಟಿನಲ್ಲಿ ಸಂಪರ್ಕಿಸಬೇಕಾದ ವಿಳಾಸ

1. ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಜೈಲ್ ರೋಡ್, ಕೊಡಿಯಾಲ್‌ಬೈಲ್ ಪೋಸ್ಟ್, ಮಂಗಳೂರು -575 003. ಫೋನ್ : 0820-2493978
2. ಡಾ। ಎ. ಪಿ. ಕೃಷ್ಣ, ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಸಮಿತಿ, ಶ್ರೀ ಸುಬ್ರಹ್ಮಣ್ಯ ಸಭಾ, ಜೈಲ್ ರೋಡ್, ಕೊಡಿಯಾಲ್‌ಬೈಲ್ ಪೋಸ್ಟ್, ಮಂಗಳೂರು -575 003. ಮೊಬೈಲ್ : 9845213997, ಇ-ಮೇಲ್ : subramanyasabhamangalore@gmail.com

## ಉಡುಪಿಯಲ್ಲಿ ಸಂಪನ್ನಗೊಂಡ ಪ್ರಥಮ ಸ್ಥಾನಿಕ ಕನ್ನಡ ಸಾಹಿತ್ಯ ಸಮ್ಮೇಳನ

(...1ನೇ ಪುಟದಿಂದ)

ಹರಿದಾಸ ದಿ। ಪಾವಂಜೆ ಲಕ್ಷ್ಮೀನಾರಾಯಣಪ್ಪನವರ ದೇವರ ನಾಮಗಳನ್ನು ಹಾಡುವ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವದ ಸಂದರ್ಭದಲ್ಲಿ ಉಡುಪಿಯ ಸ್ಥಾನೀಯ ಸ್ಥಾನಿಕ ಬ್ರಾಹ್ಮಣ ಸಂಘದ ಸಹಯೋಗದೊಂದಿಗೆ ಏರ್ಪಡಿಸಿರುವ ಈ ಸಾಹಿತ್ಯ ಸಮ್ಮೇಳನ ಒಂದು ಮಹತ್ವದ ನಡೆಯಾಗಿ ನಮ್ಮ ಸಮಾಜ ಬಾಂಧವರ ಸಾಹಿತ್ಯಾಸಕ್ತಿಗೆ ಒಂದು ಹೊಸ ಆಯಾಮ ನೀಡಲಿ ಮತ್ತು ನಮ್ಮವರ ಪ್ರತಿಭೆಗಳು ಅರಳಿ ಸುಗಂಧ ಬೀರುವಂತಾಗಲಿ ಎಂದು ಹಾರೈಸಿದರು. ಪ್ರಾರಂಭದಲ್ಲಿ ಕು। ವೃಂದಾರಾವ್ ಪ್ರಾರ್ಥನೆ ಮಾಡಿದರು. ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ವೈ. ಭುವನೇಂದ್ರರಾವ್ ಸ್ವಾಗತಿಸಿದರು. ಮಂಗಳೂರು ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿ ಡಾ। ಎ.ಪಿ.ಕೃಷ್ಣ ಪ್ರಸ್ತಾವನ ಭಾಷಣ ಮಾಡಿ ಈ ಸಾಹಿತ್ಯ ಸಮ್ಮೇಳನವನ್ನೆ ಏರ್ಪಡಿಸಿದ ಔಚಿತ್ಯದ ಬಗ್ಗೆ ವಿವರಿಸಿದರು. ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಕರುಣ್‌ರಾವ್ ಬೆಳ್ಳೆ ವಂದಿಸಿದರು. ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಜತೆ ಕಾರ್ಯದರ್ಶಿ ಕೆ. ವೇಣುಗೋಪಾಲ್‌ರಾವ್ ಕಾರ್ಯಕ್ರಮ ನಿರೂಪಿಸಿದರು.

**ಸಮಾರೋಪ ಸಮಾರಂಭ** : ಸಂಜೆ ನಡೆದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಆವರೆಗೆ ನಡೆದ ಸಣ್ಣಕಥೆ, ಹನಿಗವನ-ಚುಟುಕು, ಹಾಗೂ ಕವನ ಗೋಷ್ಠಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಮಾತನಾಡಿದ ಶ್ರೀ ಈಶ್ವರಯ್ಯ ನವರು ಈ ವಿವಿಧ ಪ್ರಾಕಾರಗಳ ಸ್ವರೂಪ, ಬೆಳವಣಿಗೆ ಹಾಗೂ ಆಶಯಗಳ ಬಗ್ಗೆ ವಿವರವಾಗಿ ಮಾತನಾಡಿ ಭಾಗವಹಿಸಿದ ಕವಿಗಳು ಹಾಗೂ ಕಥೆಗಾರರು ತಮ್ಮ ಒಳ್ಳೆಯ ಪ್ರಯತ್ನವನ್ನು ನಮ್ಮ ಮುಂದೆ ಪ್ರದರ್ಶಿಸಿದ್ದಾರೆ. ಅವರ ಸಾಹಿತ್ಯಾಸಕ್ತಿ ಹೆಚ್ಚು ಪ್ರಕರವಾಗಿ ಬೆಳೆದು ಅವರು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷವಾದ ಕೊಡುಗೆಯನ್ನು ನೀಡುವಂತಾಗಲಿ ಎಂದು ಹಾರೈಸಿದರು. ಮಂಗಳೂರು ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಮ್.ಆರ್.ವಾಸುದೇವ್ ಶತಮಾನೋತ್ಸವ ಕಾರ್ಯಕ್ರಮಗಳ ವಿವರ ನೀಡಿದರು. ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಶ್ರೀ ಜಗನ್ನಿವಾಸ ರಾವ್ ಸ್ವಾಗತಿಸಿದರು. ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷ ಶ್ರೀ ಎಸ್.ಎಮ್.ರಾವ್ ಧನ್ಯವಾದ ಅರ್ಪಿಸಿದರು. ಮಂಗಳೂರಿನ ಶ್ರೀ ನಾಗರಾಜ ರಾವ್ ವರ್ಕಾಡಿ ಕಾರ್ಯಕ್ರಮ ನಿರೂಪಿಸಿದರು.

**ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ ಮತ್ತು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಜಂಟಿ ಆಶ್ರಯದಲ್ಲಿ ಮಂಗಳೂರು ಸುಬ್ರಹ್ಮಣ್ಯಸಭಾದ ಶತಮಾನೋತ್ಸವದ ಅಂಗವಾಗಿ ನೆರವೇರಿದ ಸ್ಥಾನಿಕ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನವು ಯಶಸ್ವಿಯಾಗಿದ್ದು, ಇದಕ್ಕೆ ಸಹಕರಿಸಿದ ಎಲ್ಲಾ ಸಮಾಜ ಬಾಂಧವರಿಗೆ ಸಾಹಿತ್ಯ ಸಮ್ಮೇಳನದ ಸಮಿತಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.**

## ಸ್ಥಾನಿಕ ಬ್ರಾಹ್ಮಣ ಸಮಾಜದ ಕವಿ, ಸಾಹಿತಿ, ಲೇಖಕರ ವಿವರ

**ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಶತಮಾನೋತವವನ್ನು 2007-08ರಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಶತಮಾನೋತವದ ಅಂಗವಾಗಿ ‘ಸ್ಮರಣ ಸಂಚಿಕೆ’ ಯೊಂದನ್ನು ಪ್ರಕಟಿಸಲು ತೀರ್ಮಾನಿಸಲಾಗಿದೆ. ಈ ಸಂಚಿಕೆಯಲ್ಲಿ ನಮ್ಮ ಸಮಾಜದ ಕವಿ, ಸಾಹಿತಿ, ಲೇಖಕರು ತಮ್ಮ ತಮ್ಮ ಪರಿಚಯದ ಸಂಕ್ಷಿಪ್ತ ವಿವರವನ್ನು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಕಳುಹಿಸಬೇಕಾಗಿ ಅಪೇಕ್ಷೆ.**

**ಕೆ. ಗೋಪಾಲರಾವ್, ಸಹಸಂಪಾದಕ, ಬಿಳಿನೆಲೆ, ಅಂಚೆ ನೆಟ್ಟಣ - 574230 ಪುತ್ತೂರು ತಾಲೂಕು, ದ.ಕ. ದೂರವಾಣಿ ಸಂಖ್ಯೆ : 958251-262213**

### ಕಳುಹಿಸಬೇಕಾದ ವಿವರ

**1) ಹೆಸರು / ವಿಳಾಸ....., ಕಾವ್ಯನಾಮ (ಇದ್ದರೆ)..... 2) ತಂದೆ, ತಾಯಿಯ ಹೆಸರು....**
**3) ಹುಟ್ಟಿದ ಊರು, ದಿನಾಂಕ..... 4) ಪ್ರಕಟಿಸಿದ ಪುಸ್ತಕಗಳ ವಿವರ....**
**5) ಸಾಹಿತ್ಯ ಕ್ಷೇತ್ರದಲ್ಲಿ ಸಿಕ್ಕಿರುವ ಪ್ರಶಸ್ತಿ / ಸನ್ಮಾನ ಇತ್ಯಾದಿ.....**

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದಲ್ಲಿ ಚಾಲ್ತಿಯಲ್ಲಿರುವ ವಿವಿಧ ಠೇವಣಿಗಳ ಬಡ್ಡಿದರ

| | |
|---|---|
| ನಿರಖು ಠೇವಣಿ - 6 ತಿಂಗಳವರೆಗೆ | 6% |
| 181 ದಿನಗಳವರೆಗೆ 1 ವರ್ಷದವರೆಗೆ | 8% |
| 13 ತಿಂಗಳಿಂದ 2 ವರ್ಷದವರೆಗೆ | 8.5% |
| 25 ತಿಂಗಳಿಂದ 3 ವರ್ಷದವರೆಗೆ | 9.5% |
| ಹಿರಿಯ ನಾಗರಿಕರಿಗೆ 1% ಹೆಚ್ಚು | |

### ಸಾಲಗಳ ಮೇಲಿನ ಬಡ್ಡಿದರ

| | |
|---|---|
| ಜಾಮೀನು ಸಾಲ | 15% |
| ಸ್ವಂತ ಉಪಯೋಗದ ವಾಹನ | 13% |
| ವ್ಯಾಪಾರಕ್ಕೆ ಉಪಯೋಗದ ವಾಹನ | 14% |
| ಭದ್ರತೆಯ ಸಾಲಗಳಿಗೆ ಭೂಮಿ, ಮನೆ, ಜೀವವಿಮಾ ಪಾಲಿಸಿ, ಎನ್.ಎಸ್.ಸಿ. ಇತ್ಯಾದಿಗಳ ಭದ್ರತೆಯ ಮೇಲೆ) | 14% |
| ಆಭರಣ ಈಡಿನ ಸಾಲ | 13% |